**ಸಿ.ಸಿ. ಸಂಖ್ಯೆಃ 39 / 2012**
**ಚಾಸಾ-01 / ಪ್ರಾಸಾ-01**

**ದಿನಾಂಕಃ 26-12-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನ್ಯಾಯಾಲಯವು ಸಂಪೂರ್ಣ ಕಡತವನ್ನು ಪರಿಶೀಲನೆ ಮಾಡಿದಾಗ ಪಿರ್ಯಾದಿನಲ್ಲಿ ಕಲಂ-120(ಬಿ) ಐಪಿಸಿ ಅಂಶಗಳು ಕಂಡು ಬಂದಿರುವುದಿಲ್ಲ, ಸಾಕ್ಷಿಗೆ ಸದರಿ ಕಲಂನ ಅಂಶಗಳ ಹೊರತಾಗಿ ಪಿರ್ಯಾದಿನಲ್ಲಿ ನಮೂದಿಸಿರುವ ಅಂಶಗಳ ಬಾಬ್ತು ತಮ್ಮ ವಿಚಾರಣೆಯನ್ನು ನೀಡಬೇಕಾಗಿ ನಿರ್ದೇಶಿಸಿದ್ದರು ಸಹ ಆದರೂ ಸಹ ಸಾಕ್ಷಿಯು ತಮ್ಮ ಸ್ವಯಿಚ್ಛೆಯಿಂದ ಈ ಕೆಳಕಂಡಂತೆ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ ಃ-

ನನ್ನ ಮೇಲೆ ಕೊಲೆ ಪ್ರಯತ್ನ ಮಾಡಲು ಮುಖ್ಯ ಕಾರಣ ನಾನು ಸಾರ್ವಜನಿಕರ ಉಪಯೋಗಕ್ಕಾಗಿ ಬೋರ್ವೆಲನ್ನು ತೆಗೆಸುತ್ತಿದ್ದಾಗ ಅದನ್ನು ಹೊನ್ನಪ್ಪ, ಗಂಗಧರಯ್ಯ, ರಾಜಶೇಖರಯ್ಯ ಹಾಗೂ 1ನೇ ಆರೋಪಿ ಸತೀಶ ಇವರುಗಳು ಬೋರವೆಲ್ ತೆಗೆಸುವುದಕ್ಕೆ ಅಡ್ಡಿಪಡಿಸಿದ ಕಾರಣ ಕುದೂರು ಪೋಲಿಸ್ ಠಾಣೆಯಲ್ಲಿ ನಾನು ಸದರಿಯವರುಗಳ ವಿರುದ್ಧ ಪ್ರಕರಣ ದಾಖಲು ಮಾಡಿದ್ದು, ಸದರಿ ಪ್ರಕರಣ ರಾಜೀ ಮಾಡಿಸಲು ದಿನಾಂಕಃ 12-03-2011 ರಂದು ಮಾಗಡಿ ವೃತ್ತ ನಿರೀಕ್ಷಕರು, ನನ್ನನ್ನು ಹಾಗೂ ಆರೋಪಿತರುಗಳನ್ನು ಕರೆದಿದ್ದು, ನನಗೆ ಆದಂತಹ ನಷ್ಟವನ್ನು ಆರೋಪಿತರುಗಳು ಭರಿಸದೇ ಇದ್ದ ಕಾರಣ ಸದರಿ ಪ್ರಕರಣ ರಾಜೀಯಾಗದೇ ಆರೋಪಿತರುಗಳ ವಿರುದ್ಧ ದೋಷರೋಪಣ ಪಟ್ಟಿ ಸಲ್ಲಿಸಿದ ನಂತರ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಒಳಸಂಚು ಮಾಡಿರುತ್ತಾರೆ.

ನಮ್ಮ ಅಣ್ಣನವರ ಬಳಿ ಆರೋಪಿತರುಗಳು ಈ ಮೇಲೆ ಹೇಳಿದ ಪ್ರಕರಣವನ್ನು ಹಿಂಪಡೆದುಕೊಳ್ಳಬೇಕೆಂದು ಬೆದರಿಕೆಯನ್ನು ಹಾಕಿರುತ್ತಾರೆ. ಸದರಿ ವಿಚಾರವನ್ನು ನನಗೆ ರಾಜಶೇಖರಯ್ಯ ಮತ್ತು ಕೃಷ್ಣಪ್ಪನವರು ತಿಳಿಸಿರುತ್ತಾರೆ.

**ಸಿ.ಸಿ. ಸಂಖ್ಯೆಃ 39 / 2012**
**ಚಾಸಾ-01 / ಪ್ರಾಸಾ-01**

ದಿನಾಂಕಃ 05-07-2011 ರಂದು ಮಧು, ಸುರೇಶ, ನಾರಾಯಣಪ್ಪ ಬೆಳಿಗ್ಗೆ 8.30 ಗಂಟೆಗೆ ನನಗೆ ದೂರವಾಣಿ ಕರೆ ಮಾಡಿ ಕೊಲೆ ಮಾಡಲು ವೀರಣ್ಣ, ಬ್ರಮರಂಬ, ನಂಜಯ್ಯ, ರಾಜಣ್ಣ ನವರು ಸಂಚು ಮಾಡಿರುತ್ತಾರೆಂದು ನನಗೆ ತಿಳಿಸಿರುತ್ತಾರೆ. ದಿನಾಂಕಃ 09-07-2011 ರಂದು ನಾನು ನನ್ನ ಊರಿಗೆ ಜಾತ್ರೆಗಾಗಿ ಬಂದಿದ್ದಂತಹ ಸಮಯದಲ್ಲಿ ಆರೋಪಿತರುಗಳ ಒಳಸಂಚಿನ ಪ್ರಕಾರ ಮಾರಕಾಸ್ತ್ರಗಳ ಜೊತೆ ನನ್ನ ಮನೆಗೆ ಅತಿಕ್ರಮ ಪ್ರವೇಶ ಮಾಡಿದ್ದು, ನನಗೆ ಮನೆಯಿಂದ ಹೊರಗಡೆ ಎಳೆದುಕೊಂಡು ಬಂದು ಈ ಮೇಲೆ ಹೇಳಿರುವ ಕಾರಣಕ್ಕಾಗಿ ಆರೋಪಿತರುಗಳು ಒಳಸಂಚು ಮಾಡಿ ಈ ಹಿಂದೆ ದಿನಾಂಕಃ 27-07-2015 ರಂದು ನನ್ನ ವಿಚಾರಣೆಯಲ್ಲಿ ಹೇಳಿರುವ ರೀತಿ ನನ್ನ ಮೇಲೆ ಹಲ್ಲೆ ಪಡಿಸಿರುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ಈ ಮೇಲೆ ಹೇಳಿದ ವಿಚಾರಣೆಗೆ ಸಂಬಂಧಿಸಿದಂತೆ ಕೆಲವು ದಾಖಲಾತಿಗಳನ್ನು ಅರ್ಜಿಯ ಸಮೇತ ಸಲ್ಲಿಸಿದ ಕಾರಣ ಈ ಹಂತದಲ್ಲಿ ತಕರಾರಿಗಾಗಿ ಪ್ರಕರಣವನ್ನು ಮುಂದುಡಲಾಗಿರುತ್ತದೆ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**